House and one which no one can ever countenance with equanimity.

In the meanwhile I am sure that the Government will agree with me that the Hon'ble Member who has received the letter is entitled to adequate protection and I have no doubt the Government will arrange for the same adequately.

Debate on Question No. 24 re : alleged loss and subsequent surrender of a revolver in the Police Department

Mr. SPEAKER.—Sri B. P. Nagaraja Murthy has requested permission to raise a discussion on the subject-matter of Question No. 24 (Short Notice Question) included in the list of questions and answers on 31st March 1954. The question relates surrender of revolver in the Police Department. Under Rule 39 (3), I hold that the matter is of sufficient public importance. It will be taken up on Tuesday, the 20th April 1954 at the conclusion of the business of the day.

Now the debate on the Housing Board Bill will continue.

MYSORE HOUSING BOARD BILL, 1954

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮ ಪ್ರಜಾ ಸರ್ಕಾರದವರು ಹೌಸಿಂಗ್ ಬೋರ್ಡ್ ಬಿಲ್ಲನ್ನು ಈ ನಭೆಯ ಮುಂದಿಟ್ಟಿರತಕ್ಕಂಥಾದ್ದು ನಿಜವಾಗಿಯೂ ಕೂಡ ಪ್ರಜಾಪ್ರಭುತ್ವದ ತತ್ವಕ್ಕೆ ಅನುಗುಣವಾಗಿದೆಯೆಂದು ನಂಬಿಕೊಂಡಿರುವವರಲ್ಲಿ ನಾನೂ ಒಬ್ಬ. ಮೊದಲು ಈ ನಭೆ ಆರಂಭವಾದ ತಕ್ಷಣವೇ ನನ್ನ ಒಂದು ಸಣ್ಣ ಭಾಷಣದಲ್ಲಿ ಪ್ರಜಾಪ್ರಭುತ್ವ ತತ್ವದಲ್ಲಿ ಸಾಮಾನ್ಯ ಪ್ರಜೆಗಳಿಗೆ ಅವರ ನ್ಯಾಯವಾದ ಹಕ್ಕನ್ನು ಕೊಡಿಸುವುದು ಪ್ರಜಾಪ್ರಭುತ್ವದ ಮುಖ್ಯವಾದಂಥ ಕರ್ತವ್ಯವೆಂದು ಎರಡು ವರ್ಷಗಳ ಹಿಂದೆಯೇ ನಾನು ಹೇಳಿದ್ದೇನೆ. ಆದರೂ ಕೂಡ ಈಗ ನಮ್ಮ ಸಂಸ್ಥಾನದಲ್ಲಿ ಗ್ರಾಮಾಂತರಗಳಲ್ಲಿರುವ ಜನರ ಸ್ಥಿತಿಗತಿಗಳನ್ನು ನೋಡುವುದಾದರೆ, ನಿಜವಾಗಿಯೂ ಪ್ರಜಾಪ್ರಭುತ್ವದಲ್ಲಿ ನೀವು ಮಾಡುವ ವಾಗ್ದಾನದಂತೆ ಜನರಿಗೆ ಅನುಕೂಲ ಪಡಿಸುವುದಕ್ಕೆ ಸಾಧ್ಯವಾಗುತ್ತಿದೆಯೆ ಎಂಬ ಅಂಶವನ್ನು ಕೂಲಂಕಷವಾಗಿ ವಿಚಾರ ಮಾಡಬೇಕಾದದ್ದು ಅಗತ್ಯ. ಈಗ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಈ ಬಿಲ್ಲನ್ನು ತಂದಿರುವುದು ನನಗೆ ಬಹಳ ಆನಂದವನ್ನೂ ಮತ್ತು ತೃಪ್ತಿಯನ್ನೂ ಉಂಟುಮಾಡಿದೆ. ಸರ್ಕಾರದವರು ಏನೇ ಕಷ್ಟಬಂದರೂ ಕೂಡ ಧೈರ್ಯಮಾಡಿ ಇದನ್ನು ಜಾರಿಗೆ ಕೊಟ್ಟ ಪಕ್ಷದಲ್ಲಿ ಮುಖ್ಯವಾದಂಥ ಈ ಕರ್ತವ್ಯವನ್ನು ನಿಜವಾಗಿ ಯೂ ನಿರ್ವಹಮಾಡಿದ ಹಾಗಾಗುತ್ತದೆಂದು ತಿಳಿದುಕೊಂಡಿದ್ದೇನೆ.

ಸ್ವಾಮಿ, ಈ ಬಿಲ್ಲನ್ನು ನಾನು ಸಂಪೂರ್ಣವಾಗಿ ಓದಿ ನೋಡಿದ್ದೇನೆ. ಈಗ ಇದನ್ನು ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡುತ್ತೇವೆಂದು ಹೇಳುವುದರ ದೆಸೆಯಿಂದ ಮುಖ್ಯವಾಗಿ ಇದರ ಕಾರ್ಸ್ಟಿಟ್ಯೂಷ್ಷ ವಗ್ಗೆರೆ ವಿಚಾರದಲ್ಲಿ ಹೆಚ್ಚಾಗಿ ಚರ್ಚೆ ಮಾಡುವುದಿಲ್ಲ. ಆದರೆ ಮುಖ್ಯವಾದ ಕೆಲವು ಅಂಶಗಳನ್ನು ಮಾತ್ರ ಈ ನಭೆಯ ಮುಂದಿಡಬೇಕೆಂದು ಯೋಚನೆ ಮಾಡಿದ್ದೇನೆ. ನಾನು ಸರ್ಕಾರಿ ಅಧಿಕಾರದಲ್ಲಿದ್ದಾಗ ಗುಡಿಸಲುಗಳನ್ನು ಬದಲಾವಣೆ ಮಾಡುವುದಕ್ಕೇನು ಮಾಡಬೇಕೆಂದು ಯೋಚನೆ ಮಾಡಿ ಕೂಲಂಕಷವಾಗಿ ಪರಿಶೀಲಿಸಿದೆ. ಮುಖ್ಯವಾಗಿ ಹರಿಜನರಿಗೆ ಬೆಂಕಿ ಅನಾಹುತವನ್ನು ತಪ್ಪಿಸುವುದಕ್ಕೆ ಹೆಂಚಿನ ಮನೆಗಳನ್ನು ತಯಾರಿಸಬೇಕೆಂಬ ತತ್ವವನ್ನು ಮನಸ್ಸಿನಲ್ಲಿಟ್ಟುಕೊಂಡು ಯೋಚನೆಮಾಡಿದಾಗ, ಅಂಕಿ ಅಂಶಗಳನ್ನು ಎರಡು ಕಡೆಗಳಲ್ಲೂ ಶೇಖರ ಮಾಡಿದ್ದರಲ್ಲಿ 40 ವರ್ಷಗಳೊಳಗಾಗಿ ಹರಿಜನರಿಗೆ, ಗುಡಿಸಿಲಿನಲ್ಲಿರುವವರಿಗೆ ಹೆಂಚಿನ ಮನೆಗಳನ್ನೊದಗಿಸಲು ಸಾಧ್ಯ, ಒಂದುವೇಳೆ 50 ವರ್ಷಗಳಾದರೂ ಆಗಬಹುದು ಎಂದು ನಿರ್ದಿಷ್ಟವಾಯಿತು. ಆದರೆ ಈಗ ಸರ್ಕಾರದವರು ತಂದಿರುವ ಬಿಲ್ಲಿನ ಅಭಿಪ್ರಾಯ ನೋಡುವುದಾದರೆ 40 ಅಥವಾ 50 ವರ್ಷಗಳಷ್ಟು ದೂರ ಹೋಗಬೇಕಾಗಿಲ್ಲ. ಇದು ಮುಖ್ಯ ಕರ್ತವ್ಯವೆಂದು ಪರಿಗಣಿಸುವುದಾದರೆ ಸುಮಾರು 25 ವರ್ಷಗಳೊಳಗಾಗಿ ಮೈಸೂರು ಸಂಸ್ಥಾನದಲ್ಲಿ ಈ ಕೊರತೆಯನ್ನು ನಿವಾರಿಸಬಹುದೆಂದು ನಿರ್ದಿಷ್ಟವಾಗಿ ನಂಬಿಕೆ ನನಗಿದೆ. ಈಗ ಒಂದು ಸೆಂಟ್ರಲ್ ಬೋರ್ಡ್ ಮಾಡಬೇಕು, ಅದರಲ್ಲಿ ಏಳು ಜನ ಮೆಂಬರುಗಳಿರಬೇಕು, ಒಬ್ಬ ಛೇರ್ಮನ್ ಇರಬೇಕು ಎಂದು ಬಿಲ್ಲನ್ನು ತಂದಿದ್ದಾರೆ. ಏಳು ಜನ ಸಾಕಾಗುವುದಿಲ್ಲ, ಹೆಚ್ಚು ಮೆಂಬರುಗಳಿರಬೇಕು ಎಂದು ಕೆಲವರು ತಿಳಿಸಿದ್ದಾರೆ. ಆದ್ದರಿಂದ ಇವರ ಕಾರ್ಸ್ಟಿಟ್ಯೂಷ್ಷ ಯಾವ ರೀತಿ ಇರಬೇಕೆಂಬುದನ್ನು ಇದನ್ನು ಆಧಾರವಾಗಿಟ್ಟುಕೊಂಡು ಪರಿಶೀಲಿಸಬೇಕು. ಈ ವಿಚಾರದಲ್ಲಿ ನಾನು ಹೆಚ್ಚಾಗಿ ಸೂಚಿಸುತ್ತಿಲ್ಲ. ಆದರೆ ಸೆಂಟ್ರಲ್ ಕಮಿಟಿಯಲ್ಲಿ ಈಗಿರುವಂತೆ ಏಳು ಜನರಿರಬೇಕೆ, ಸರ್ಕಾರದವರು ಅವರನ್ನು ನೇಮಕ ಮಾಡಬೇಕೆ ಅಥವಾ ನಾನ್ ಅಫಿಷಿಯಲ್ ಬಾಡಿ ಇರಬೇಕೆ, ಸರ್ಕಾರದ ಕೈವಾಡ ಹೆಚ್ಚಾಗಿರಬೇಕೆ ಅಥವಾ ಕಡಮೆಯಾಗಿರಬೇಕೆ ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸಬೇಕು. ಏಕೆಂದರೆ ಇವರ ಜವಾಬ್ದಾರಿಯುತವಾಗಿರುವ ಸಮಿತಿಯಿದು. ದೇಶದಾದ್ಯಂತ ಇದನ್ನು ಹಬ್ಬಿಸಬೇಕು. ಈ ಸೆಂಟ್ರಲ್ ಕಮಿಟಿಗೆ ಸಹಾಯವಾಗುವಂತೆ ಪ್ರತಿ ತಾಲ್ಲೂಕಿನಲ್ಲೂ, ಪ್ರತಿ ಡಿಸ್ಟ್ರಿಕ್ಟ್‌ನಲ್ಲೂ ಸಮಿತಿಯಿರಬೇಕೆಂದು ಕೆಲವರು ಸಲಹೆ ಮಾಡಿದ್ದಾರೆ; ಆದರೆ ಡಿಸ್ಟ್ರಿಕ್ಟ್‌ನಲ್ಲಿರುವುದಕ್ಕಿಂತ ಪ್ರತಿ ತಾಲ್ಲೂಕಿನಲ್ಲೂ ಕೂಡ ಇಂಥ ಸಮಿತಿಯಿದ್ದರೆ ತಾಲ್ಲೂಕುಗಳಲ್ಲಿರುವ ಸಮಿತಿ ಸೆಂಟ್ರಲ್ ಕಮಿಟಿಗೆ ಅಫಿಲಿಯೇಟ್ ಆಗಬೇಕೆ, ಅಲ್ಲಿ ಅದಕ್ಕೆ ರೆಪ್ರಸೆಂಟೇಷ್ಷ ಇರಬೇಕೆ, ಅದೇ ಬೇರೆ ಎಗ್ಸಿಕ್ಯುಟಿವ್ ಕಮಿಟಿಯಾದರೆ ಅದು ಎಂಥ ಕೆಲಸ ಮಾಡಬೇಕು ಎಂಬುದನ್ನು ಹೇಳಬೇಕಾಗಿದೆ. ಧೈರ್ಯವಿಟ್ಟರ ಹಾಗಿರಲಿ.

ಎರಡನೆಯದಾಗಿ, ಈ ಸಮಿತಿಯನ್ನು ಈ ಹೌಸಿಂಗ್ ಸ್ಕೀಮನ್ನು ಮಾಡುವುದಾದರೆ ಯಾವರೀತಿ ಎಗ್ಸಿಕ್ಯೂಟ್ ಮಾಡಬಹುದು, ಯಾವ ರೀತಿಯಲ್ಲಿ ಸುಲಭವಾಗಿ ಜಾರಿಗೆ ತರಬಹುದು ಎಂದು ನೋಡಿದರೆ